O.S. No. 34/2020
CW- 1

**ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | | |
|---|---|---|
| ಹೆಸರು | : | ಜನಾರ್ಧನ |
| ತಂದೆ | : | ವೆಂಕೋಬಣ್ಣ |
| ವಯಸ್ಸು | : | *36* ವರ್ಷ |
| ಉದ್ಯೋಗ | : | ವ್ಯವಸ್ಥಾಪಕರು, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ |
| ***ವಿಳಾಸ*** | : | *ರಾಯಚೂರು ಶಾಖೆ, ರಾಯಚೂರು* |

***ಮುಖ್ಯ ವಿಚಾರಣೆಃ***

ನಾನು ಈಗ್ಗೆ ಆರು ತಿಂಗಳಿಂದ ರಾಯಚೂರು ಶಾಖೆಯ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿ ವ್ಯವಸ್ಥಾಪಕ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದಿಂದ ಕೇಳಿದಂತೆ ನಮ್ಮ ಬ್ಯಾಂಕಿನ ಶಾಖೆಯಲ್ಲಿ ಮೊಹಮ್ಮದ ಫರೂಕ್ ಗ್ರಾಹಕರ ಹೆಸರಿನಲ್ಲಿ ಅಲಹಾಬಾದ್ ಬ್ಯಾಂಕ್ ರಾಯಚೂರು ಶಾಖೆಯಲ್ಲಿರುವ ಅವರ ಖಾತೆ ಸಂ. 331802010012144 ಗೆ ಚೆಕ್ ನಂ. 529584 ದಿ. 12-7-2019 ರಂತೆ ರೂ. 2,53,000/- ಗಳಿಗೆ ಹಾಕಲ್ಪಟ್ಟಿತ್ತು. ಸಾಕ್ಷಿಯು ಹಾಜರುಪಡಿಸಿದ ಸದರಿ ಚೆಕ್ ಅನ್ನು ನಿ.ಸಿ-**1** ಎಂದು ಗುರುತಿಸಲಾಯಿತು. ಸದರಿ ಚೆಕ್ಕು ಪಾವತಿಸಲ್ಪಟ್ಟಿದೆ.

ಮೊಹಮ್ಮದ್ ನೂರೂದ್ದೀನ್ @ ಎಂ.ಡಿ.ಫರೂಕ್ ನಮ್ಮ ಬ್ಯಾಂಕಿನ ಅವರ ಖಾತೆಯ ಚೆಕ್ ಸಂ. 02101876, ದಿ.16-07-2019 ರ ರೂ.1,50,000/- ಗಳಿಗೆ ಮೊಹಮದ್ ಓಮರ್ ಫರೂಕ್ ರವರ ಹೆಸರಿನಲ್ಲಿ ಕೊಟ್ಟಿದ್ದರು. ಸಾಕ್ಷಿಯು ಹಾಜರುಪಡಿಸಿದ ಸದರಿ ಚೆಕ್

ಅನ್ನು ನಿಸಿ-**2** ಎಂದು ಗುರುತಿಸಲಾಯಿತು. ಸದರಿ ಚೆಕ್ಕು ಪಾವತಿಸಲ್ಪಟ್ಟಿದೆ. ನಿಸಿ-2 ತೆರೆದ ಚೆಕ್ಕು, ಆದ್ದರಿಂದ ಚೆಕ್ಕು ಪಡೆದವರ /ಹೊಂದಿದವರ ಹೆಸರನ್ನು, ಸಹಿಯನ್ನು ಮತ್ತು ಅವರ ಮೊಬೈಲ್ ನಂಬರ್ ಅನ್ನು ಸದರಿ ಚೆಕ್ ಮೇಲೆ ನಮೂದಿಸಲಾಗಿದೆ.

( ಕೋರದಿದ್ದರು ಹೆಚ್ಚುವರಿಯಾಗಿ ಸಲ್ಲಿಸಲ್ಪಟ್ಟ ರೂ.1,00,000 ದ ಚೆಕ್ ಸಂ. 101890/ 02101890 ದಿ. 16-07-2019 ನ್ನು ಗೊಂದಲ ನಿವಾರಣೆಗಾಗಿ ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಮರಳಿಸಿದೆ )

ನಮ್ಮ ಬ್ಯಾಂಕಿನ ಸದರಿ ಗ್ರಾಹಕರ ಖಾತಾ ವಹಿಯನ್ನು ಸಲ್ಲಿಸಿದ್ದೇನೆ. ಸಾಕ್ಷಿಯು ಸಲ್ಲಿಸಿದ ಸದರಿ ಖಾತಾ ವಹಿಯ ಗಣಕೀಕೃತ ಪ್ರತಿಯನ್ನು ನಿಸಿ-**3** ಎಂದು ಗುರುತಿಸಲಾಯಿತು. ನಿಸಿ-3 ರ ಪ್ರಕಾರ ದಿ. 15-07-2019 ರಂದು ಸದರಿ ನಮ್ಮ ಗ್ರಾಹಕರಿಗೆ ರೂ.2,53,000/-ಗಳು ಚೆಕ್ ನಂ. 529584 ಮೂಲಕ ಜಮಾ ಆಗಿದೆ. ಅದೇರೀತಿ ನಿಸಿ-2 ರಂತೆ ದಿ.16-07-2019 ರಂದು ಸದರಿ ನಮ್ಮ ಗ್ರಾಹಕರ ಖಾತೆಯಿಂದ ರೂ.1,50,000/- ಗಳು ಮೊಹಮ್ಮದ ಓಮರ್ ಫರೂಕ್ ಹೆಸರಿಗೆ ನಗದಾಗಿ ಪಾವತಿಸಲಾಗಿದೆ.

<u>ಪಾಟೀ ಸವಾಲು : ಶ್ರೀ ಸಿ ಕೆ ಆರ್ ವಕೀಲರಿಂದ</u>

ನಿಸಿ-3 ರಲ್ಲಿ ನಮ್ಮ ಬ್ಯಾಂಕಿನ ಸದರಿ ಗ್ರಾಹಕರ ಖಾತೆಯಲ್ಲಿ ಅಲಹಾಬಾದ್ ಬ್ಯಾಂಕಿನ್ ಚೆಕ್ ಸಂ.599585 ರ ದಿ.9-5-2019 ರ ರೂ. 2,50,000/- ಗಳಿಗೆ ಕೊಡಲ್ಪಟ್ಟಿದೆಯೇ ಎಂದರೆ ಅಥವಾ ಜಮಾ ಆಗಿದೆಯೆ ಎಂದರೆ ಇಲ್ಲ. ನಿಸಿ-2 self ಚೆಕ್ ಅಲ್ಲ ಎಂದರೆ ಸರಿ, ಮೊಹಮ್ಮದ್ ಓಮರ್ ಫರೂಕ್ ರವರ ಹೆಸರಿಗೆ ಕೊಟ್ಟಿತ್ತು. ಸದರಿ ಚೆಕ್ ನ ಹಿಂಭಾಗದಲ್ಲಿ ನಮ್ಮ ಗ್ರಾಹಕರ ಮತ್ತು ಚೆಕ್ ನ್ನು ಹೊಂದಿದ್ದವರ ಇಬ್ಬರ ಸಹಿಯು ಇದೆ ಎಂದರೆ ಸರಿ.

O.S. No.  34/2020
CW- 1

( ಶ್ರೀ.ಎಸ್.ಕೆ.ಪಿ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**